**ದಿ: 04-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು: ಪ್ರತಿವಾದಿ 2 ಮತ್ತು 3 ಪರವಾಗಿ ಶ್ರೀ ಪಿ ಟಿ ಎನ್ ವಕೀಲರಿಂದ:**

1. ಈ ದಾವೆಯನ್ನು ನನ್ನ ಅಣ್ಣಂದಿರಾದ ರಘೋತ್ತಮಾಚಾರ್ಯ ಮತ್ತು ರಾಘವೇಂದ್ರಾಚಾರ್ಯ ರವರು ನನ್ನ ಮತ್ತು ಲೀಲಾದೇವರು ಇವರ ವಿರುದ್ದ ದಾವಾ ಆಸ್ತಿಗಳಲ್ಲಿ ನಮಗೂ ಆಸ್ತಿ ಬರಬೇಕೆಂದು ಮಾಡಿರುತ್ತಾರೆ. ಇವರ ಹೊರತು ಬೇರೆಯವರ ಮೇಲೆ ಮಾಡಿರುವುದಿಲ್ಲ. ಈ ದಾವೆಯನ್ನು ಯಾವ ಯಾವ ಸರ್ವೆನಂಬರ್ ಗಳ ಮೇಲೆ ಸಲ್ಲಿಸಿರುತ್ತಾರೆ ಮತ್ತು ಅದರ ಅಳತೆ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ನಮ್ಮ ಕುಟುಂಬಕ್ಕೆ ಕೊಪ್ಪರ ಗ್ರಾಮದಲ್ಲಿ 20-00 ಎಕರೆ ಮತ್ತು ಹೂನೂರು ಗ್ರಾಮದಲ್ಲಿ 3-00 ಎಕರೆ ಒಟ್ಟು 23-00 ಎಕರೆ ಜಮೀನುಗಳು ಇರುತ್ತವೆ. ಕೊಪ್ಪರ ಗ್ರಾಮದಲ್ಲಿ 20-00 ಎಕರೆ ಜಮೀನಿನ ಸರ್ವೆ ನಂಬರ್ 118 ಆಗಿರುತ್ತದೆ. ಸದರಿ ಜಮೀನು ನಮ್ಮ ಮೂರು ಜನ ಅಣ್ಣ ತಮ್ಮಂದಿರ ಹೆಸರಿನಲ್ಲಿರುತ್ತದೆ. ಸದರಿ ಕೊಪ್ಪರ ಗ್ರಾಮದ ಜಮೀನು ಈ ದಾವೆಯಲ್ಲಿ ಸೇರ್ಪಡೆಯಾಗಿರುವುದಿಲ್ಲ.

2. ನಾನು ನ್ಯಾಯಾಲಯಕ್ಕೆ ನನ್ನ ಪರವಾಗಿ ಪ್ರತಿವಾದ ಪತ್ರ ಸಲ್ಲಿಸಿರುತ್ತೇನೆ. ನನ್ನ ಪ್ರತಿವಾದ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆ ಸಾಕ್ಷಿ ಪ್ರಮಾಣ ಪತ್ರದಲ್ಲಿ ಕೊಪ್ಪರ ಗ್ರಾಮದಲ್ಲಿ 20-00 ಎಕರೆ ಜಮೀನಿನ ಸರ್ವೆ ನಂಬರ್ 118 ಆಗಿರುತ್ತದೆ ಮತ್ತು ಸದರಿ ಜಮೀನು ನಮ್ಮ ಮೂರು ಜನ ಅಣ್ಣ ತಮ್ಮಂದಿರ ಹೆಸರಿನಲ್ಲಿರುತ್ತದೆ ಮತ್ತು ಸದರಿ ಕೊಪ್ಪರ ಗ್ರಾಮದ ಜಮೀನು ಈ ದಾವೆಯಲ್ಲಿ ಸೇರ್ಪಡೆಯಾಗಿರುವುದಿಲ್ಲ ಎಂದು ಹೇಳಿ ಬರೆಸಿಲ್ಲ. ನಾನು ಕೊಪ್ಪರ ಗ್ರಾಮದಲ್ಲಿ ಇರುವ ಮನೆಯಲ್ಲಿ

ವಾಸ ಮಾಡುತ್ತಿದ್ದೇನೆ. ವಾದಿ ನಂಬರ್ -1 ರವರು ರಾಯಚೂರಿನಲ್ಲಿ ಇರುತ್ತಾರೆ, ಮತ್ತು ವಾದಿ ನಂಬರ್ 2 ಲಿಂಗಸೂಗೂರಿನಲ್ಲಿರುತ್ತಾರೆ.

ಮುಂದುವರಿದ ಪಾಟೀಸವಾಲಿಗೆ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**
ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ